
ನಂತರ ಪಠ್ಯದಲ್ಲಿ ಬರುವ ಯಾವುದಾದರೂ ಪರಿಕಲ್ಪನೆಯನ್ನು ಅಥವಾ ಕವಿತೆಯ ಒಂದು ಸಾಲನ್ನು ಶೀರ್ಷಿಕೆಯಾಗಿರಿಸಿಕೊಂಡು ವಿಸ್ತರಿಸಿ ಬರೆಯಿರಿ. ವಿಸ್ತರಿಸಿ ಬರೆಯಬೇಕಾದರೆ ಮೂರನೆಯ ಅಂಶವಾದ ವೈಚಾರಿಕ ಅಭ್ಯಾಸ ಇರಬೇಕಾಗುತ್ತದೆ.

**3. ವೈಚಾರಿಕ ಅಭ್ಯಾಸ:** ವೈಚಾರಿಕ ಅಭ್ಯಾಸದಲ್ಲಿ ಎರಡು ಘಟಕಗಳಿವೆ. ಮೊದಲನೆಯದು ವಿವರಗಳು ಮತ್ತು ಮಾಹಿತಿಗಳ ಸಂಗ್ರಹ. ದಿನ ಪತ್ರಿಕೆಗಳ ಓದು, ಗ್ರಂಥಾಲಯ ಪುಸ್ತಕಗಳ ಓದು, ರೇಡಿಯೊ ವಾರ್ತೆಗಳನ್ನು ಕೇಳುವುದು, ಒಳ್ಳೆಯ ಉಪನ್ಯಾಸವನ್ನು ಕೇಳುವುದು, ಪಠ್ಯಪುಸ್ತಕವನ್ನು ಓದುವುದು ಮುಂತಾದ ಚಟುವಟಿಕೆಗಳಿಂದ ನಿಮ್ಮಲ್ಲಿ ವಿವರ ಮತ್ತು ಮಾಹಿತಿಯ ಸಂಗ್ರಹ ಹೆಚ್ಚಾಗುತ್ತದೆ.

ಆದರೆ ಕೇವಲ ವಿವರಗಳು ಮತ್ತು ಮಾಹಿತಿಗಳ ಸಂಗ್ರಹವಿದ್ದ ಮಾತ್ರಕ್ಕೆ ವಿಸ್ತರಿಸಿ ಬರೆಯಲು ಆಗುವುದಿಲ್ಲ. ವಿವರ ಮತ್ತು ಮಾಹಿತಿಗಳನ್ನು ಶೀರ್ಷಿಕೆಯು ಬಯಸುವ ಚೌಕಟ್ಟಿನ ಒಳಗೆ ವಿನ್ಯಾಸಗೊಳಿಸಿ ಬರೆಯಬೇಕು. ಅದಕ್ಕೆ ನಿಮ್ಮಲ್ಲಿ ಚಿಂತನಾ ಸಾಮರ್ಥ್ಯವಿರಬೇಕು. ನೀವು ಸಂಗ್ರಹಿಸಿದ ವಿವರ ಮತ್ತು ಮಾಹಿತಿಗಳನ್ನು ಹಲವು ದೃಷ್ಟಿಕೋನಗಳಿಂದ ಯೋಚಿಸುವುದರಿಂದ ನಿಮ್ಮ ಚಿಂತನಾ ಸಾಮರ್ಥ್ಯ ಹೆಚ್ಚಾಗುತ್ತದೆ. ಉದಾಹರಣೆಗೆ: 'ಕೂಡಿ ಬಾಳಿದರೆ ಸ್ವರ್ಗ ಸುಖ' ಎಂಬ ಗಾದೆ ಮಾತನ್ನು ನೀವು ವಿಸ್ತರಿಸಿ ಬರೆಯಬೇಕು. ಎಲ್ಲರೂ ಪರಸ್ಪರ ಸಹಕಾರದಿಂದ ಒಟ್ಟಾಗಿ ಬದುಕಿದರೆ ಸುಖವಾಗಿ ಬದುಕಬಹುದು ಎನ್ನುವುದು ಅದರ ಒಂದು ಅರ್ಥ. 'ಕೂಡಿಸುವುದು' ಎನ್ನುವುದೂ ಅಲ್ಲಿರುವ ಇನ್ನೊಂದು ಅರ್ಥ. 1000 ರೂಪಾಯಿಗೆ ಇನ್ನು 1000 ಕೂಡಿಸಿದರೆ ಆಗ ಭೌತಿಕ ಸುಖ ಹೆಚ್ಚಲು ಅವಕಾಶವಿದೆ. ಒಬ್ಬ ಸ್ನೇಹಿತನಿಗೆ ಇನ್ನೊಬ್ಬ ಸ್ನೇಹಿತನನ್ನು ಕೂಡಿಸಿಕೊಂಡು ಇಬ್ಬರು ಸ್ನೇಹಿತರನ್ನು ಮಾಡಿಕೊಂಡರೆ ಸಿಗುವ ಸಹಕಾರ ಹೆಚ್ಚಾಗಿ ಸುಖವು ಸಾಧಿಸಲ್ಪಡುತ್ತದೆ ಎಂದರ್ಥ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆಯನ್ನು ನೀವು ಪರೀಕ್ಷೆಯಲ್ಲಿ ವಿಸ್ತರಿಸಿ ಬರೆಯಬೇಕು. ವೇದ ವಿದ್ವಾಂಸರಿಂದ ರಚನೆಯಾದದ್ದು, ವಾಸ್ತವದಲ್ಲಿ ಉಪಯೋಗ ಆಗದೆಯೂ ಇರಬಹುದು. ಆದರೆ ಗಾದೆ ಅನುಭವದಿಂದ ಬಂದದ್ದು, ಉಪಯೋಗ ಆಗಿಯೇ ತೀರುತ್ತದೆ ಎನ್ನುವುದು ಒಂದು ಅರ್ಥ. ಆದರೆ ಸ್ವತಃ ಋಗ್ವೇದವೇ 'ವೇದ ವಾಕ್ಯ' ಎನ್ನುವುದಕ್ಕೆ ಕೊಡುವ ಅರ್ಥ ಏನು? ಇದು ಈ ಋಷಿಯ ಅನುಭವ. ಈ ಮಾರ್ಗದಲ್ಲಿ ಸಾಗಿದಾಗ ಇದೇ ಅನುಭವ ನಿನಗೂ ಆದರೆ ಮುಂದುವರಿ. ನಿನಗೆ ಈ ಅನುಭವ ದೊರೆಯದಿದ್ದರೆ ಈ ದಾರಿಯನ್ನು ಬಿಟ್ಟು ನಿನ್ನ ಅನುಭವದಲ್ಲಿ ಮುಂದುವರಿ ಎನ್ನುತ್ತದೆ. 'ವೇದ ವಾಕ್ಯ' ಎಂದರೆ ನಿನ್ನ ಅನುಭವದ ಆಧಾರದಲ್ಲಿ ವೇದವನ್ನು ಪ್ರಶ್ನಿಸು ಎಂದೇ ಋಗ್ವೇದದ ಅರ್ಥ. ಅಂದರೆ ಗಾದೆಯ ಮಹತ್ವವನ್ನು ವೇದವೇ ಎತ್ತಿಹಿಡಿದಿದೆ. ಈ ರೀತಿಯೂ ಯೋಚಿಸಲು ಆಗುತ್ತದೆ. ಆಗ ನೀವು ವಿಸ್ತರಿಸಿ ಬರೆದುದರ ಮಹತ್ವ ಜಾಸ್ತಿಯಾಗುತ್ತದೆ. ಜಾಸ್ತಿ ಅಂಕಗಳು ಬರುತ್ತವೆ.



## ಪ್ರಬಂಧಗಳು

ಪ್ರಬಂಧಗಳಲ್ಲಿ ಮೂರು ವಿಧಗಳಿವೆ.

**1. ಸಂಶೋಧನಾ ಪ್ರಬಂಧಗಳು:** ಇವು ಉನ್ನತ ಅಧ್ಯಯನದಲ್ಲಿ ನಿರ್ದಿಷ್ಟ ವಿಷಯವನ್ನು ಕ್ಷೇತ್ರ ಕಾರ್ಯ, ಸಂದರ್ಶನ, ಅಧ್ಯಯನ ಮುಂತಾದವುಗಳಿಂದ ಸಾಧಿಸಿ ಬರೆಯುವಂತಹವು.

**2. ವಿವರಣಾ ಪ್ರಬಂಧಗಳು:** ಇವು ಶಾಲಾ–ಕಾಲೇಜುಗಳಲ್ಲಿ ಬರೆಯುವ ಸಾಂಪ್ರದಾಯಿಕ ಪ್ರಬಂಧಗಳು. ಇವುಗಳಲ್ಲಿ ಸಂಗ್ರಹಿಸಿದ ವಿವರಗಳ ಪ್ರಬಂಧ ರೂಪದ ನಿರೂಪಣೆ ಮಾತ್ರ ಇರುತ್ತದೆ. ಉದಾಹರಣೆಗೆ: 'ಜನಸಂಖ್ಯಾ ಸ್ಫೋಟ' ಎಂಬ ಪ್ರಬಂಧ ಕೊಟ್ಟಾಗ ಕಾರಣ, ಪರಿಣಾಮ, ಪರಿಹಾರ ಎಂಬ ಶೀರ್ಷಿಕೆಯಲ್ಲಿ ನಿರೂಪಿಸಲಾಗುತ್ತದೆ. ಅನಕ್ಷರತೆಯನ್ನು ಕಾರಣ ಎಂತಲೂ, ಆಹಾರದ ಅಭಾವವನ್ನು ಪರಿಣಾಮ ಎಂತಲೂ ಈಗಲೂ ಬರೆಯಲಾಗುತ್ತದೆ.

**3. ವಿಮರ್ಶಾ ಪ್ರಬಂಧಗಳು:** ವಿವರಣಾ ಪ್ರಬಂಧದ ವಿವರಗಳನ್ನೇ ಚಿಂತಿಸಿ ಸತ್ಯಕ್ಕೆ ಹತ್ತಿರವಾಗುವಂತೆ ಬರೆದಾಗ ಅದು ವಿಮರ್ಶಾ ಪ್ರಬಂಧ. ಉದಾಹರಣೆಗೆ, 1950ರ ಕಾಲದಲ್ಲಿ ಅರ್ಥಶಾಸ್ತ್ರ ಪಠ್ಯವನ್ನು ಬರೆಯುವಾಗ ಜ್ಞಾನವನ್ನು ಪತ್ರಿಕೆ ಅಥವಾ ಪುಸ್ತಕದಿಂದ ಮಾತ್ರ ಪಡೆಯಬಹುದಿತ್ತು. ಅಕ್ಷರಜ್ಞಾನ ಇಲ್ಲದವರಿಗೆ ಅದು ಸಿಗುತ್ತಿರಲಿಲ್ಲ. ಆದ್ದರಿಂದ ಜನಸಂಖ್ಯಾ ಸ್ಫೋಟಕ್ಕೆ ಆ ಕಾಲಕ್ಕೆ ಅನಕ್ಷರತೆ ಕಾರಣವೇ. ಆದರೆ ಈಗ ಅಕ್ಷರದ ಅಗತ್ಯವೇ ಇಲ್ಲದೆ ಜನಸಂಖ್ಯಾ ತಿಳಿವಳಿಕೆಯನ್ನು ನೀಡುವ ಮಾಧ್ಯಮಗಳಿವೆ. ಈಗಲೂ ಅದೇ ಕಾರಣವಾಗಲಾರದು. ಹಾಗೆಯೇ ಜನಸಂಖ್ಯೆ ಏರುವಾಗ ಆಹಾರೋತ್ಪಾದನೆ ಇದ್ದಲ್ಲೇ ಇರುತ್ತದೆ ಎಂದು ಭಾವಿಸಿದಾಗ ಮಾತ್ರ ಜನಸಂಖ್ಯಾ ಏರಿಕೆಯಿಂದ ಆಹಾರದ ಅಭಾವವಾಗುತ್ತದೆಂದು ಅನಿಸುತ್ತದೆ. ಆದರೆ ವಾಸ್ತವ ಹಾಗಿಲ್ಲ. ಜನಸಂಖ್ಯೆಯ ಏರಿಕೆಯೊಂದಿಗೆ ಆಹಾರೋತ್ಪಾದನೆಯೂ ಏರುತ್ತದೆ. ಆದ್ದರಿಂದ 1950ಕ್ಕಿಂತ ಮೂರು ಪಟ್ಟು ಜಾಸ್ತಿ ಜನಸಂಖ್ಯೆಯಾದರೂ ಆಹಾರದ ಸಮಸ್ಯೆ ಕಡಿಮೆಯಾಗಿದೆ. ಈ ರೀತಿ ಚಿಂತಿಸಿ ವಿಮರ್ಶಿಸಿ ಪ್ರಬಂಧ ಬರೆದಾಗ ಜಾಸ್ತಿ ಅಂಕಗಳೂ ಬರುತ್ತವೆ. ಕಲಿಕೆಯೂ ಪರಿಣಾಮಕಾರಿಯಾಗುತ್ತದೆ.

## ಪ್ರಬಂಧದ ವಿನ್ಯಾಸ

ಪ್ರಬಂಧಕ್ಕೊಂದು ವಿನ್ಯಾಸವಿದೆ. ಶೀರ್ಷಿಕೆಯ ನಂತರ 'ಪೀಠಿಕೆ' ಬರುತ್ತದೆ. ಶೀರ್ಷಿಕೆಗೆ 'ಏನು' ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ಸಿಗುವ ಉತ್ತರವೇ ಪೀಠಿಕೆ. ಉದಾಹರಣೆಗೆ, 'ಭ್ರಷ್ಟಾಚಾರ' ಎಂಬ ಶೀರ್ಷಿಕೆಯ ಪ್ರಬಂಧಕ್ಕೆ 'ಭ್ರಷ್ಟಾಚಾರವೆಂದರೇನು?' ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ನಿಮಗೆ ಸಿಗುವ ಉತ್ತರವೇ ಅದರ ಪೀಠಿಕೆ. ಪ್ರಬಂಧದ ಕೊನೆಯಲ್ಲಿ 'ಉಪಸಂಹಾರ' ಬರುತ್ತದೆ. ಪ್ರಬಂಧದಲ್ಲಿ ಹೇಳಲಾದ ವಿಷಯಗಳಿಗೆ 'ಮುಂದೇನು?' ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ಸಿಗುವ ಉತ್ತರವೇ ಅದರ ಉಪಸಂಹಾರ. ಪೀಠಿಕೆ ಮತ್ತು ಉಪಸಂಹಾರಗಳು ಎರಡು ಮೂರು